# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **328**

2 ಸದಸ್ಯರ ಹೆಸರು : **ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)**

3 ಉತ್ತರಿಸಬೇಕಾದ ದಿನಾಂಕ : **15.02.2024**

4 ಉತ್ತರಿಸುವ ಸಚಿವರು : **ಗೃಹ ಸಚಿವರು**

| ಪ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರಿನ ಹುಳಿಮಾವು ಆರಕ್ಷಕ ಠಾಣಾ ವ್ಯಾಪ್ತಿಯಲ್ಲಿ 2020–21ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇನ್ಸ್‌ಪೆಕ್ಟರ್‌ರವರು ಭೂಗಳ್ಳರ ಜೊತೆ ಶಾಮೀಲಾಗಿ ಸರ್ಕಾರಿ ಸ್ವತ್ತುಗಳಿಗೆ ಅನಧಿಕೃತವಾಗಿ ಬೇಲಿ ಹಾಕಿಸಿರುವ ಸಂಬಂಧ ಪೊಲೀಸ್ ದೂರುಗಳ ಪ್ರಾಧಿಕಾರದಲ್ಲಿ ಬೆಂಗಳೂರು ಪೆಟ್ರೋಲಿಯಂ ಡೀಲರ್ಸ್ ಅಸೋಸಿಯೇಷನ್ ಇವರು ದೂರು ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರಿನ ಹುಳಿಮಾವು ಆರಕ್ಷಕ ಠಾಣಾ ವ್ಯಾಪ್ತಿಯಲ್ಲಿ 2020–21ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇನ್ಸ್‌ಪೆಕ್ಟರ್‌ರವರು ಭೂಗಳ್ಳರ ಜೊತೆ ಶಾಮೀಲಾಗಿರುವ ಬಗ್ಗೆ ಪೊಲೀಸ್ ದೂರು ಪ್ರಾಧಿಕಾರದಲ್ಲಿ ದೂರು ದಾಖಲಾಗಿರುತ್ತದೆ.<br><br>ಈ ದೂರು ಅರ್ಜಿಯನ್ನು ಪೊಲೀಸ್ ದೂರು ಪ್ರಾಧಿಕಾರದವರು ದಿನಾಂಕ 09.02.2024 ರಂದು ಸಭೆಯಲ್ಲಿ ಮಂಡಿಸಿದ್ದು, ವಿಚಾರಣೆ ಬಾಕಿ ಇರುತ್ತದೆ. ದೂರುದಾರರಿಗೆ Synopsis ಮಂಡಿಸಲು ಸೂಚಿಸಿ ಸಭೆಯನ್ನು 04.04.2024 ಕ್ಕೆ ಮುಂದೂಡಲಾಗಿದೆ. |
| (ಆ) | ಈ ಸಂಬಂಧ ಸರ್ಕಾರ ಇದುವರೆವಿಗೆ ತೆಗೆದುಕೊಂಡ ಕ್ರಮಗಳೇನು; | |
| (ಇ) | ಭೂಗಳ್ಳರ ಪರವಾಗಿ ಕಾರ್ಯ ನಿರ್ವಹಿಸುತ್ತಾ, ತಪ್ಪು ಮಾಹಿತಿ ನೀಡಿರುವಂತಹ ಅಧಿಕಾರಿಗಳ ಮೇಲೆ ಸರ್ಕಾರ ಇದುವರೆವಿಗೆ ತೆಗೆದುಕೊಂಡ ಕ್ರಮಗಳೇನು; | 2020–21ನೇ ಸಾಲಿನಲ್ಲಿ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇನ್ಸ್‌ಪೆಕ್ಟರ್ ರವರು ಸದನಕ್ಕೆ ಕಣ್ತಪ್ಪಿನಿಂದ ತಪ್ಪು ಮಾಹಿತಿ ಸಲ್ಲಿಸಿರುವ ಆರೋಪಕ್ಕಾಗಿ ಸದರಿಯವರ ವಿರುದ್ಧ ಇಲಾಖಾ ವತಿಯಿಂದ ಕೆ.ಎಸ್.ಪಿ. (ಡಿಪಿ) ನಿಯಮಗಳು 1965/89ರ ನಿಯಮ 7 ರ ಪ್ರಕಾರ ಶಿಸ್ತು ಕ್ರಮ ಜರುಗಿಸಲಾಗಿದೆ. |
| (ಈ) | ಹಲವಾರು ಫಿರ್ಯಾದುದಾರರು ಭೂಗಳ್ಳರ ವಿರುದ್ಧ ದೂರುಗಳನ್ನು ನೀಡಿದ್ದರೂ ಎಫ್‌ಐ.ಆರ್. ಮಾಡದೆ, ಎನ್.ಸಿ.ಆರ್. ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಹುಳಿಮಾವು ಪೊಲೀಸ್ ಠಾಣೆಯಲ್ಲಿ ಯಾವುದೇ ಪಿರ್ಯಾದುದಾರರು ಭೂಗಳ್ಳರ ವಿರುದ್ಧವಾಗಲೀ ಅಥವಾ ಇತರೆ ಯಾವುದೇ ವ್ಯಕ್ತಿಗಳ ಅಥವಾ ಇತರೆ ಯಾವುದೇ ವ್ಯಕ್ತಿಗಳ ವಿರುದ್ಧವಾಗಲೀ ದೂರು ನೀಡಿದ್ದಲ್ಲಿ ದೂರನ್ನು ಸ್ವೀಕರಿಸಿ ಸದರಿ ದೂರು ಸಂಜ್ಞೇಯ ಅಪರಾಧವಾಗಿದ್ದಲ್ಲಿ ಕೂಡಲೇ ಎಫ್.ಐ.ಆರ್.ನ್ನು ದಾಖಲಿಸಿ ತನಿಖೆ ಕೈಗೊಳ್ಳಲಾಗುತ್ತದೆ ಹಾಗೂ ದೂರುಗಳು ಅಸಂಜ್ಞೇಯ ಸ್ವರೂಪದ್ದಾಗಿದ್ದಲ್ಲಿ ಎನ್.ಸಿ.ಆರ್. ಪ್ರಕರಣಗಳನ್ನು ದಾಖಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ. |

| | | |
|---|---|---|
| (ಉ) | ಸದರಿಯವರ ಮೇಲೆ ಅನೇಕ ದೂರುಗಳು ದಾಖಲಾಗಿದ್ದರೂ, ಒಂದೇ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ದೇವರಚಿಕ್ಕನಹಳ್ಳಿಯಿಂದ ಬಂಡೆಪಾಳ್ಯ ಆರಕ್ಷಕ ಠಾಣೆಗೆ ಸದರಿಯವರನ್ನು ಸ್ಥಳ ನಿಯುಕ್ತಿಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪೊಲೀಸ್ ಇನ್ಸ್‌ಪೆಕ್ಟರ್ ರವರನ್ನು ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಕರ್ನಾಟಕ ರಾಜ್ಯ, ಬೆಂಗಳೂರು ರವರ ಕಛೇರಿ ಆದೇಶ ಸಂಖ್ಯೆ: ಹೆಚ್.ಆರ್.ಎಂ-1(2)/05/2022-23, ಓ.ಬಿ.ಸಂ:581/2023, ದಿನಾಂಕ 03.10.2023 ರೀತ್ಯಾ ಸಿ.ಐ.ಡಿ. ಕಛೇರಿಯಿಂದ ಬಂಡೇಪಾಳ್ಯ ಪೊಲೀಸ್ ಠಾಣೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ. |
| (ಊ) | ಸದರಿ ಅಧಿಕಾರಿಯ ಅಕ್ರಮಗಳ ಸಂಬಂಧ ಇದುವರೆವಿಗೂ ಎಷ್ಟು ಪ್ರಕರಣಗಳು ದಾಖಲಾಗಿವೆ; ಸದರಿ ಪ್ರಕರಣಗಳು ಯಾವ ಹಂತದಲ್ಲಿವೆ? | ಸದರಿ ಪೊಲೀಸ್ ಇನ್ಸ್‌ಪೆಕ್ಟರ್‌ರವರ ವಿರುದ್ಧ 'ಅಕ್ರಮಗಳ ಸಂಬಂಧ' ಪ್ರಕರಣಗಳು ದಾಖಲಾಗಿರುವುದಿಲ್ಲ.<br>ಆದರೆ ಪೊಲೀಸ್ ಇಲಾಖೆಯ ಕರ್ತವ್ಯ ನಿರ್ವಹಣೆಯಲ್ಲಿ ಅಶಿಸ್ತು ಮತ್ತು ನಿರ್ಲಕ್ಷ್ಯತೆಗಾಗಿ ಸದರಿಯವರ ವಿರುದ್ಧ ಕೆ.ಎಸ್.ಪಿ. (ಡಿಪಿ) ನಿಯಮಗಳು 1965/89ರ ನಿಯಮ 7 ರ ಪ್ರಕಾರ ಒಟ್ಟು 13 ಬಾರಿ ಶಿಸ್ತು ಕ್ರಮ ಜರುಗಿಸಲಾಗಿದೆ ಹಾಗೂ 01 ಬಾರಿ ಅಮಾನತ್ತುಗೊಳಿಸಲಾಗಿದೆ. |

ಸಂಖ್ಯೆ: ಒಇ 27 ಪಿಇಎಂ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು